**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 05.09.2021.

**1] ಮಹಿಳಾ ಪೊಲೀಸ ಠಾಣೆ ಗುನ್ನೆ ನಂ: 102/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 30.09.2021 ರಂದು 12.00 ಗಂಟೆಯ ಸುಮಾರಿಗೆ ಇದರಲ್ಲಿಯ ಕಾಣೆಯಾದ ರಶ್ಮಿ ತಂ॥ ರಮೇಶ ವಗ್ಗಾ, ವಯಾ: 22 ವರ್ಷ, ಸಾ॥ ಇಲಕಲ್, ಕುಂಬಾರ ಪ್ಲಾಟ್ ಇವಳು ವಿಜಯಪುರದ ಜಾಡರ ಓಣಿಯಲ್ಲಿರುವ ತನ್ನ ಚಿಕ್ಕಪ್ಪ ಬಸವರಾಜ ತಂದೆ ಯಲ್ಲಪ್ಪ ವಗ್ಗಾ ಮತ್ತು ಅನೀಲ ತಂದೆ ಯಲ್ಲಪ್ಪ ವಗ್ಗಾ ಇವರ ಮನೆಯಲ್ಲಿ ಪೂಜಾ ಕಾರ್ಯಕ್ರಮ ಇದ್ದರಿಂದ ಇಬ್ಬರು ಕೂಡಿ ವಿಜಯಪುರಕ್ಕೆ ಬಂದು ಅವರ ಮನೆಯಲ್ಲಿ ವಾಸವಾಗಿದ್ದಾಗ ಪಿರ್ಯಾದಿಯು ಸಂತೆ ತಗೆದುಕೊಂಡು ಬರಲು ಬಾಜಾರಕ್ಕೆ ಬಂದು ಮರಳಿ 12.30 ಗಂಟೆಗೆ ಮನೆಗೆ ಹೋದಾಗ ಮನೆಯಲ್ಲಿ ರಶ್ಮಿ ಇವಳು ಕಾಣಿಸಲಿಲ್ಲ. ಸ್ವಲ್ಪ ಹೊತ್ತು ನೋಡಿದ್ದು ಅವಳು ಮರಳಿ ಮನೆಗೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ರಾಜೇಶ್ವರಿ ಗಂಡ ರಮೇಶ ವಗ್ಗಾ ಸಾ॥ ಇಲಕಲ್ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 04.09.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಎ.ಪಿ.ಎಮ್.ಸಿ ಪೊಲೀಸ ಠಾಣೆ ಗುನ್ನಾ. ನಂ: 79/2021 ಕಲಂ: 380 ಐಪಿಸಿ 41(1)(ಡಿ) ರೆ/ವು 102 ಸಿಆರ್‌ಪಿಸಿ.**

ದಿನಾಂಕ: 04.09.2021 ರಂದು 11.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ 1) ಅರ್ಷದ ಬಶೀರಅಹ್ಮದ ಮುಲ್ಲಾ ಸಾ: ನವಬಾಗ, ಟಾಂಗಾ ಗ್ಯಾರೇಜ ಹತ್ತಿರ, ವಿಜಯಪುರ 2) ಶೋಹೆಬ್ ಮಹ್ಮದ ರಫೀಕ ಮುತ್ತಗಿ. ಸಾ॥ ಜೆ. ಎಮ್ ರೋಡ್, ದರಬಾರ ಹೌಸ್ ಮಗ್ಗಲು, ವಿಜಯಪುರ 3) ಸೋಹೆಲ್ ರಾಜಾಭಕ್ಷ ನದಾಫ. ಸಾ॥ ತಾಜ ಬಾವಡಿ ಹತ್ತಿರ, ವಿಜಯಪುರ ಇವರು ವಿಜಯಪುರ ಶಹರದ ಗೋಲಗುಮ್ಮಟ ಕಂಪೌಂಡದ ಹಿಂದೆ ಸಾರ್ವಜನಿಕ ರಸ್ತೆಯ ಮೇಲೆ ಎರಡು ಮೋಟಾರ ಸೈಕಲಗಳ ಮೇಲೆ ಮೂರು ಜನರು ಸಂಶಯಾಸ್ಪದವಾಗಿ ಬರುತ್ತಿದ್ದು ಅವರು ತಮ್ಮ ಪ್ಯಾಂಟಿನ ಜೇಬುಗಳನ್ನು ಮುಚ್ಚಿಕೋಳ್ಳುತ್ತಿದ್ದಾಗ ನಾವು ಅವರ ಜೇಬುಗಳನ್ನು ಚೆಕ್ ಮಾಡಲು ಅವರ ಜೇಬುಗಳಲ್ಲಿ ಮೋಬೈಲ್ ಪೋನ್ ಗಳಿದ್ದು ಅದರಲ್ಲಿ 08 ಸ್ಮಾರ್ಟ ಫೋನ್ ಒಟ್ಟು ಅ॥ಸಾ॥ಕಿ 42,000 ರೂ ಕಿಮ್ಮತ್ತಿನ ಮೋಬೈಲ್ ಪೋನ್ ಗಳಿದ್ದು ನಾವು ಅವರಿಗೆ ನಿಮ್ಮ ಹತ್ತಿರ ಯಾವುದಾದರು ರಶೀದಿಗಳು ಇವೆಯೋ ಹೇಗೆ ಅಂತಾ ಕೇಳಿದಾಗ ಅವರ ಹತ್ತಿರ ದಾಖಲಾತಿಗಳು ಇರದೇ ಮತ್ತು ಅವುಗಳ ಮಾಲಿಕರ ಬಗ್ಗೆ ಸರ್ಮಪಕ ಮಾಹಿತಿ ನೀಡದೇ ಇದ್ದಾಗ ಸದರಿಯವರ ಮೇಲೆ ಸಂಶಯ ಬಂದು ವಿಚಾರಿಸಲು ತಾವು ಕಳ್ಳತನ ಮಾಡಿಕೊಂಡು ಬಂದಿದ್ದು ಯಾರಾದರು ಗಿರಾಕಿಗಳು ಸಿಕ್ಕಲ್ಲಿ ಅವರಿಗೆ ಕಡಿಮೆ ಬೆಲೆಗೆ ಮಾರಾಟ ಮಾಡಲು ಬಂದಿರುತ್ತೇನೆ ಅಂತಾ ಹೇಳಿದ್ದು, ಆಗ ಸಮಯ ಬೆಳ್ಳಿಗ್ಗೆ 11:00 ಗಂಟೆ ಆಗಿತ್ತು. ಸದರಿಯವರು ಸದರಿ ಮೋಬೈಲ್ ಪೋನ್ ಗಳನ್ನು ಎಲ್ಲಿಯೋ ಕಳ್ಳತನ ಮಾಡಿಕೊಂಡು ಬಂದು ಅವುಗಳ ಬಗ್ಗೆ ಸಮರ್ಪಕವಾದ ಮಾಹಿತಿ ನೀಡದೇ ಇದ್ದಾಗ ಸಿಕ್ಕ ಅಪರಾಧ. ಈ ಬಗ್ಗೆ ಸ:ತ: ಸೋಮೇಶ ಗೆಜ್ಜಿ ಪಿ.ಎಸ್.ಐ (ಕಾ.ಸು) ಎ.ಪಿ.ಎಂ.ಸಿ ಪೊಲೀಸ್ ಠಾಣೆ ವಿಜಯಪುರ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 04.09.2021 ರಂದು ಎ.ಪಿ.ಎಮ್.ಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.